ವಿದ್ಯಾವಂತ್ರಾಗಿದಾರ?'

'ಇಲ್ಲ.'

'ಮತ್ತೆ ನಾನ್ಯಾಕ್ ಆಗ್ಬೇಕು?'

'ಅರೆ! ನಿಂದೊಳ್ಳೆ ತರ್ಕ ಆಯ್ತಲ್ಲ! ಅವ್ರ್ ವಿದ್ಯಾವಂತರಲ್ಲ ಅಂತ ನೀನೂ ಆಗ್‌ಬಾರ್ದ?'

'ನಿಮ್ಗಿದು ಅರ್ಥ ಆಗಲ್ಲ.'

'ಎಲ್ಲಾ ನಿನ್ನೊಬ್ಬಳಿಗೇ ಅರ್ಥ ಆಗೋದು. ಅಲ್ವ?'

'ನೋಡಿ, ನೀವ್ ಗಂಡಸ್ರು ಹೊರ್ಗಡೆ ಹೆಚ್ಚು ಇರ್‍ತೀರಿ, ಒಳ್ಗಡೆ ಹೆಂಗಸ್ರಿಗೆ ಏನೇನ್ ಆಗುತ್ತೆ, ಏನೇನ್ ಅನ್ಸುತ್ತೆ ಅಂತ ನೀವು ನೋಡಲ್ಲ. ನೋಡಿದ್ರೂ ಪೂರ್ತಿ ಅರ್ಥ ಆಗಲ್ಲ.'

'ಈಗೇನಾಯ್ತು ಅಂಥಾದ್ದು?'

'ಅಂಥಾದ್ದೇನು ಆಗಿಲ್ಲ. ಈಗ ಆ ವಿಷ್ಯ ಬಿಟ್‌ಬಿಡಿ.'

ಕಸ್ತೂರ್ ಮಾತು ಗಾಂಧಿಗೆ ಸಮಾಧಾನ ತರಲಿಲ್ಲ. ಕಸ್ತೂರ್ ಏನೋ ಮುಚ್ಚಿಡುತ್ತಿದ್ದಾಳೆಂದು ಅನ್ನಿಸಿತು. ಮತ್ತೆ ಒತ್ತಾಯಿಸಿದರು.

'ಯಾರಾದ್ರೂ ಏನಾದ್ರೂ ಅಂದ್ರ?'

'ಇಲ್ಲ; ಖಂಡಿತ ಇಲ್ಲ.'

'ಮತ್ತೆ? ಯಾಕ್ ಇಂಥ ತೀರ್ಮಾನ? ಯಾರಾದ್ರು ಏನಾದ್ರು ಅಂದ್ರ?'

'ಈಗ ಏನೂ ಅಂದಿಲ್ಲ; ಮುಂದೆ ಅನ್ ಬಾರದಲ್ವ, ಅದಕ್ಕೆ.'

'ಅಂದ್ರೆ? ಅದೇನ್ ಬಿಡಿಸ್ ಹೇಳಬಾರದ?'

'ನೋಡಿ, ನಾನು ಮನೆಕೆಲ್ಸ ಬಿಟ್ಟು ನಿಮ್ ಹತ್ರ ಓದು ಬರಹ ಕಲಿಯೋದು ಹೆಚ್ಚಾದಂಗೆಲ್ಲ ಮನೇಲಿರೊ ಬೇರೆಲ್ಲಾರಿಗೆ ಅಲ್ದೆ ಇದ್ರೂ ಕೆಲವರಿಗಾದ್ರೂ ನಂದು ಪ್ರತಿಷ್ಠೆ ಅನ್ನಿಸ್‌ಬಹುದು. ನಂದು ಮೇಲರಿಮೆ ಅಂತ ಅವ್ರಿಗ್ ಕೀಳರಿಮೆ ಕಾಡಿಸ್‌ಬಹುದು. ಹೆಂಗಸರ ಮಧ್ಯೆ ಮನಸ್ತಾಪ ಬರಬಹುದು. ಆಗ ಕುಟುಂಬ ಕೆಟ್‌ಹೋಗುತ್ತೆ. ನನಿಗ್ ಕಷ್ಟ ಆಗುತ್ತೆ. ಅದೆಲ್ಲ ಯೋಚ್ನೆ ಮಾಡಿ ಈ ನಿರ್ಧಾರಕ್ ಬಂದೆ. ಮುಂದೆ ಸಮಯ ಸಂದರ್ಭ ನೋಡೋಣ' ಎಂದು ಹೇಳುತ್ತಿರುವಾಗಲೇ ಗಾಂಧಿ ಅಣ್ಣನ ಹೆಂಡತಿ 'ಕಸ್ತೂರ್' ಎಂದು ಕೂಗಿದರು. ಕಸ್ತೂರ್ ಗಾಂಧಿಮುಖ ನೋಡಿದರು. ಗಾಂಧಿ ಮಾತಾಡಲಿಲ್ಲ. ಕಸ್ತೂರ್ 'ಬಂದೇ' ಎನ್ನುತ್ತಾ ಹೊರಟರು. ಗಾಂಧಿ ಯೋಚಿಸುತ್ತಾ ಕೂತರು.

ಅವತ್ತೇ ಕೊನೆ, ಕಸ್ತೂರ್ ಮತ್ತೆ ಓದು ಬರಹದ ಆಸಕ್ತಿ ತೋರಿಸಲಿಲ್ಲ. ಗಾಂಧಿ ಒತ್ತಾಯಿಸಿ ಸುಮ್ಮನಾದರು. ಪತ್ನಿ ತನ್ನ ಮಾತಿಗೆ ಬೆಲೆ ಕೊಡಲಿಲ್ಲವೆಂಬ ಅಸಮಾಧಾನವೂ ಅವರಲ್ಲಿತ್ತು. ಜೊತೆಗೆ ತನ್ನ ಪತ್ನಿ ಬುದ್ಧಿವಂತೆಯಾಗಿ ಬೆಳೆಯಬೇಕೆಂಬ ಬಯಕೆಯೂ ಇತ್ತು. ಗಾಂಧಿ ಒತ್ತಾಯಕ್ಕೆ ಕಸ್ತೂರ್ ಒಮ್ಮೆ ಕೇಳಿಯೇಬಿಟ್ಟರು;

'ಅಲ್ಲ, ನಮ್ಮನೇಲಿ ಸಾವಿತ್ರಿ, ಸೀತೆ, ಅನಸೂಯ ಅಂತ ಉದ್ದುದ್ದ ಕತೆ ಹೇಳ್ತಿದ್ರಲ್ಲ. ಅದೂ ಪಾಠಾನೇ ಅಲ್ವ? ಅದೂ ವಿದ್ಯೇನೆ ಅಲ್ವ?'

'ಕಸ್ತೂರ್, ಅದು ನೀತಿಪಾಠ.'

'ಹಾಗಾದ್ರೆ ನಮಗೆ ನೀತಿಪಾಠ ಬೇಡ್ವ?'

'ಬೇಡ ಅಂದೋರ್ ಯಾರು? ನೈತಿಕತೆ ಮುಖ್ಯವೇ. ಆದ್ರೆ ನಿನಗೆ ಹೇಳಿದ್ದು ಮೌಖಿಕ ಕತೆಗಳು. ಅದು ಮೌಖಿಕ ಪಾಠ. ನಾನು ನಿನಗೆ ಮೌಖಿಕವಾಗೂ ಹೇಳ್ತೇನೆ. ಲಿಖಿತವಾಗೂ ಕಲಿಸ್ತೇನೆ. ಹೆಂಗಸ್ರು ವಿದ್ಯಾವಂತರಾಗ್ಬೇಕು.'

'ಇಷ್ಟೆಲ್ಲ ಹೇಳ್ತೀರಲ್ಲ, ಸತಿ ಸಾವಿತ್ರಿ, ಸತಿ ಅನಸೂಯ, ಸೀತಾದೇವಿ, ಚಂದ್ರಮತಿ, ದಮಯಂತಿ, ಇವ್ರೆಲ್ಲ ಅವ್ರವ್ರ ಗಂಡಂದ್ರಿಂದ ಪಾಠ ಹೇಳಿಸ್ಕಂಡು ಓದು ಬರಹ ಕಲ್ತಿದ್ರ? ನಿಮ್ ಹಾಗೆ ಕಾಲೇಜ್‌ಗೆ ಹೋಗಿದ್ರ?'

(ಸಶೇಷ)

## ಅಜ್ಞಾತ ಪ್ರತಿಕ್ರಿಯೆ

### ನೈಜ ಚಿತ್ರಣದ ಪ್ರತಿಬಿಂಬ

'ಅಜ್ಞಾತ' ಧಾರಾವಾಹಿ (ವಿವೇಕಾನಂದ ಕಾಮತ್) ತುಂಬಾ ಚೆನ್ನಾಗಿ ಮೂಡಿಬಂದಿದೆ. ಧಾರಾವಾಹಿಯಲ್ಲಿನ ಎಲ್ಲ ಪಾತ್ರಗಳು ನಮ್ಮ ಸುತ್ತಲಿನ ನೈಜ ಚಿತ್ರಣವನ್ನು ಪ್ರತಿಬಿಂಬಿಸುವಂತೆ ಇದ್ದವು. ಕಾಡಿನ ಒತ್ತುವರಿಯಿಂದ ಹಿಡಿದು ಪರಿಸರ, ಅಧಿಕಾರಿ ವರ್ಗ ಎಲ್ಲಾವನ್ನು ನಿಭಾಯಿಸಿದ ಪರಿ ಮನ ಮುಟ್ಟಿತು. ಕೊನೆಯ ಅಧ್ಯಾಯದ ಕಥನ, ಕಳೆದ ಸಾಲಿನ ಕೊಡಗಿನ ವರ್ಷಧಾರೆಯನ್ನು ನೆನಪಿಸುವಂತಿತ್ತು. ಬದುಕು ನಶ್ವರ ಎಂದು ತಿಳಿಸಲು 'ಕಾಯ'ನನ್ನು ಇನ್ನೊಮ್ಮೆ ಒಂಟಿಯಾಗಿಸಿದ್ದು ಮಾತ್ರ ಹೃದಯವನ್ನು ಭಾರವಾಗಿಸಿತು.

—ವಿದ್ಯಾ ಶೆಣೈ, ಜಾನೆಟ್ ವತ್ಸಲಾ

### ನಿರೀಕ್ಷಿತ ಅಂತ್ಯ

ಅಜ್ಞಾತ ಯಾವುದೇ ವಿಶೇಷವಿಲ್ಲದೇ ನಿರೀಕ್ಷಿತ ಅಂತ್ಯ ಕಂಡಿದೆ. ಹೊಸತನವೇನಿರಲಿಲ್ಲ.

—ಶೈಲಾ ಜೋಶಿ, ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

### ಭಿನ್ನ-ಮನೋಜ್ಞ

'ಸುಧಾ'ದಲ್ಲಿ ಇತ್ತೀಚೆಗೆ ಪ್ರಕಟಗೊಂಡ ಧಾರಾವಾಹಿಗಳಲ್ಲಿ 'ಅಜ್ಞಾತ' ಭಿನ್ನವಾದುದು, ಅತ್ಯಂತ ಮನೋಜ್ಞವಾದದ್ದು. ಬದುಕಿನ ಏರಿಳಿತಗಳನ್ನು, ಜಿಜ್ಞಾಸೆಗಳನ್ನು ಕಾಯನ ಪಾತ್ರವನ್ನು ನೆಪವಾಗಿಸಿಕೊಂಡು ಕಾಮತ್ ಅವರು ಚಿತ್ರಿಸಿರುವ ಪರಿ ಅನನ್ಯ. ಬದುಕಿನ ದಟ್ಟ ಅನುಭವವನ್ನೇ ದ್ರವ್ಯವಾಗಿಸಿ ಕಥನ ಧಾರಾವಾಹಿಯಾಗಿ ಮಾರ್ಪಡಿಸಿದ ರೀತಿ ಪ್ರತಿ ಕಂತಿನಲ್ಲೂ ವ್ಯಕ್ತವಾಗಿ ಮನಮುಟ್ಟುತ್ತಿತ್ತು.

—ಎ. ಶಿವಕುಮಾರ್, ಮೈಸೂರು

### ಕುತೂಹಲಕಾರಿ ಕಥನ

ಹನ್ನೆರಡು ಕಂತುಗಳ ಧಾರಾವಾಹಿ ಪ್ರಾರಂಭದಿಂದಲೇ ಕುತೂಹಲ ಮೂಡಿಸಿಕೊಂಡು ಬಂತು. ಪ್ರತಿ ಕಂತನ್ನು ಓದಿದ ಮೇಲೆ ಮನಸ್ಸು ಅದನ್ನೇ ಮೆಲುಕು ಹಾಕುವಂತೆ ಮಾಡಿತ್ತು. 30 ವರ್ಷಗಳ ಹಿಂದೆ ನಾವು ಯಾವ ರೀತಿ ಧಾರಾವಾಹಿಗೆ ಕಾದು ಕುಳಿತಿರುತ್ತಿದ್ದೆವೋ ಆ ಭಾವನೆಯನ್ನು ಈ ಧಾರಾವಾಹಿ ಮೂಲಕ ಲೇಖಕರು ಮೂಡಿಸಿದರು. ಕಾದಂಬರಿಯಲ್ಲಿ ಕಾಯನ ವ್ಯಕ್ತಿತ್ವದ ಅನಾವರಣ ಬಹಳ ಸಹಜವಾಗಿ ಮೂಡಿಬಂದಿದೆ. ಅರಣ್ಯ ಪ್ರದೇಶದ ವಿವರಣೆ ಎಷ್ಟು ಚೆನ್ನಾಗಿತ್ತು ಎಂದರೆ, ಓದುತ್ತಿದ್ದಂತೆ ನಾವೇ ಕಾಡಿನಲ್ಲಿ ನಡೆದಾಡುತ್ತಿದ್ದೇವೆ ಎಂಬಂತೆ ಭಾಸವಾಗುತ್ತಿತ್ತು.

—ನಮಿತಾ ಪ್ರಸಾದ್, ಮಂಗಳೂರು

### ಕಥನ-ಕಲಾಕೃತಿಯ ಜುಗಲಬಂದಿ

'ಅಜ್ಞಾತ' ಅತ್ಯುತ್ತಮ ಧಾರಾವಾಹಿ. ಕಥೆಯ ಸಂದರ್ಭಕ್ಕೆ ತಕ್ಕಂಥ ಚಿತ್ರಗಳನ್ನು ನೀಡಿದ ಕಲಾವಿದ ಮೋನಪ್ಪ ಅವರಿಗೆ ಅಭಿನಂದನೆಗಳು.

—ನಾ.ಸು. ನಾಗರಾಜ್, ಬೆಂಗಳೂರು

### ಮೊದಲ ನುಡಿಯಿಂದಲೇ ಶೋಕ

'ಅಜ್ಞಾತ' ಧಾರಾವಾಹಿ ಮೊದಲಿಂದ ಕೊನೆಯವರೆಗೆ ಶೋಕಭರಿತವಾಗಿತ್ತು. ಸುಖಾಂತ್ಯವಾದರೂ ಇರಬಹುದೇನೋ ಎಂಬ ಊಹೆಯಲ್ಲಿರುವಾಗ ಅಂತ್ಯವೂ ದುಃಖಭರಿತವಾಗಿ ಮೂಡಿತು. ಕಾಯನ ಕಣ್ಣಿಂದ ದಟ್ಟ ಕಾನನದ ಚಿತ್ರಣ ಕಣ್ಣ ಮುಂದೆ ಇರುವಂತೆ ಅನ್ನಿಸುತ್ತಿತ್ತು. ಕಾಯ ಕಾನನವನ್ನು ಹೊಕ್ಕಾಗಿನ ಪ್ರಕೃತಿಯ ರಮ್ಯತೆ ಹಾಗೂ ಕೊನೆಯಲ್ಲಿ ಪ್ರಕೃತಿಯ ಭೀಕರತೆಯನ್ನು ಕಾದಂಬರಿಕಾರರು ಕಣ್ಣಿಗೆ ಕಟ್ಟಿದಂತೆ ವರ್ಣಿಸಿದ್ದಾರೆ.

—ವೀಣಾ ಮಂಜಪ್ಪ, ಬೆಂಗಳೂರು

### ಮರೀಚಿಕೆಯಾಗಿ ಉಳಿದ ಸುಖ

ಕೊನೆಗೂ ಕಾಯಕನಾಥನ ಪಾಲಿಗೆ ಬದುಕಿನ ಸುಖವನ್ನು ಅಜ್ಞಾತವನ್ನಾಗಿಸಿಯೇ ಧಾರಾವಾಹಿ ಮುಗಿಯಿತು. ಜೀವನದಲ್ಲಿ ಎಲ್ಲ ಕಳೆದುಕೊಂಡು ಏಕಾಂಗಿಯಾಗಿ, ಮತ್ತೆ ನಿಧಾನವಾಗಿ ಆಸೆಯ, ಭರವಸೆಯ ಬೆಳಕಿನತ್ತ ಇಡುತ್ತಿದ್ದ ಕಾಯನ ಹೆಜ್ಜೆಗಳು ಇನ್ನೂ ಗಟ್ಟಿಯಾಗುವ ಮುನ್ನವೇ ಕುಸಿದುಹೋಗಿದ್ದು ದುರಂತವಾದರೂ ವಾಸ್ತವ. ಧಾರಾವಾಹಿ ನಿಧಾನವಾಗಿ ಆಕರ್ಷಣೆ ಮೂಡಿಸಿ ಅಷ್ಟೇ ಬೇಗ ಮುಗಿದೂ ಹೋಯಿತು.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

### ನಮಗೂ ನಿರಾಸೆ

ತನ್ನದಲ್ಲದ ಭೂಮಿ ಹಾಗೂ ಪರಸ್ತ್ರೀ ಕಾಯನಿಗೆ ದಕ್ಕಲಿಲ್ಲ. ಅವನ ನಿರಾಸೆ ಓದುಗರಾದ ನಮಗೂ ಆಯಿತು.

—ಎನ್.ಎಸ್. ಚಂದ್ರಶೇಖರ್, ಜ್ಞಾನಸುಂದರ್